ವಿದ್ಯಾರ್ಥಿ ಪುಟ

# ಜವಾಬ್ದಾರಿಯ ಕಲಿಕೆ

'ಜ್ಯೋತಿಷ್ಮತಿ'

ಪ್ರಿಯ ವಿದ್ಯಾರ್ಥಿಗಳೆ,

ಇಲ್ಲಿಯವರೆಗೆ ಅಧ್ಯಯನದಲ್ಲಿ ಅಗತ್ಯವಾದ ಕೆಲವು ಅಭ್ಯಾಸಗಳ ಬಗ್ಗೆ ಗಮನಿಸಿದೆವು. ಈ ಬಾರಿ ಕೊನೆಯದಾಗಿ, ವಿದ್ಯಾರ್ಥಿಗಳಿಗೆ ಇರಬೇಕಾದ ಜವಾಬ್ದಾರಿ ಎಂತಹದು ಎಂಬುದರ ಬಗ್ಗೆ ನೋಡೋಣ.

ನೀವು ಕಲಿಕೆಯಲ್ಲಿ ರೂಢಿಸಿಕೊಳ್ಳಬೇಕಾದ ಹತ್ತುಹಲವು ಗುಣಗಳ ಬಗ್ಗೆ ತಿಳಿದುಕೊಳ್ಳಬಹುದು, ಅನೇಕ ಹೊಸ ಅಭ್ಯಾಸಗಳನ್ನು ಮಾಡಿಕೊಳ್ಳಬಹುದು. ಆದರೆ ಅಂತಿಮವಾಗಿ ನೀವು ಅತ್ಯಂತ ಜವಾಬ್ದಾರಿಯಿಂದ ಇಡೀ ಕಲಿಕೆಯನ್ನು ಒಂದು ತಪಸ್ಸು ಎಂಬಂತೆ ಮಾಡಿ ಪೂರ್ಣಗೊಳಿಸದಿದ್ದರೆ ಎಲ್ಲವೂ ವ್ಯರ್ಥವಾದಂತೆ. ಪ್ರತಿ ಅಧ್ಯಯನ ವರ್ಷ ಆರಂಭಗೊಂಡ ನಂತರ, ವರ್ಷದ ಕೊನೆಗೆ ಪರೀಕ್ಷೆ ಮುಗಿಯುವಲ್ಲಿತನಕ ನಿಮ್ಮ ಜವಾಬ್ದಾರಿ ಏನೆಂಬುದನ್ನು ನೀವು ಕಂಡುಕೊಳ್ಳಬೇಕು. ಅತ್ಯುತ್ತಮ ಅಧ್ಯಯನ ನಿಮ್ಮ ಗುರಿ. ಅದರ ಫಲವೇ ಉತ್ತಮ ಅಂಕ. ರ್‍ಯಾಂಕ್, ಪ್ರಥಮ ಸ್ಥಾನ ಇತ್ಯಾದಿಗಳ ಬಗ್ಗೆ ಗಮನ ಬೇಡ; ಅವು ಬಂದರೆ ಬರಲಿ, ಬರದಿದ್ದರೂ ದುಃಖ ಬೇಡ. ನಿಮ್ಮ ಶ್ರಮ, ಪ್ರಯತ್ನ, ಕಲಿಕೆ ಇವುಗಳಿಗೆ ತಕ್ಕ ಪ್ರತಿಫಲ ಬಂದರೆ ಸಾಕು – ಅದೇ ನಿಮ್ಮ ಅತ್ಯುತ್ತಮ ಸಾಧನೆ.

### ದೃಢ ನಿಶ್ಚಯ : ಮೊದಲ ಹೆಜ್ಜೆ

ನಿಮ್ಮ ಕೆಲಸಗಳಲ್ಲಿ ಅತ್ಯಂತ ಪ್ರಭಾವ ಬೀರುವ ಸಂಗತಿ ಎಂದರೆ, ನಿಮ್ಮ ಇಚ್ಛಾಶಕ್ತಿಯೊಂದೇ. ಆದ್ದರಿಂದ ಕೆಲಸ ಆರಂಭಿಸುವ ಮೊದಲು ಅದನ್ನು ಪೂರ್ಣಗೊಳಿಸುತ್ತೇನೆ ಎಂದು ದೃಢ ನಿಶ್ಚಯ ಮಾಡಬೇಕು. ವಿದ್ಯಾರ್ಥಿಗಳು ವರ್ಷದ ಆರಂಭದಲ್ಲೇ, ಈ ವರ್ಷ ಅತ್ಯುತ್ತಮ ಅಧ್ಯಯನ ಮಾಡುತ್ತೇನೆ, ಅತ್ಯುತ್ತಮ ಅಂಕ ಗಳಿಸಿ ಉತ್ತೀರ್ಣನಾಗುತ್ತೇನೆ ಎಂದು ಸಂಕಲ್ಪ ಮಾಡಬೇಕು. ಏನೇ ತೊಂದರೆ ಬರಲಿ, ಯಾವುದೇ ಅಡ್ಡಿ ಆತಂಕಗಳು ಎದುರಾಗಲಿ, ಎಲ್ಲವನ್ನೂ ನಿವಾರಿಸಿಕೊಂಡು ಚೆನ್ನಾಗಿ ಅಭ್ಯಾಸ ಮಾಡುತ್ತೇನೆ ಎಂಬ ದೃಢತೆ ಇರಬೇಕು. ಈ ರೀತಿ ನಿರ್ಧರಿಸಿದ ನಂತರ, ಈ ಸಂಕಲ್ಪದಿಂದ ಹಿಂದಕ್ಕೆ ಸರಿಯಬಾರದು, ಅದಕ್ಕೆ ತಪ್ಪಬಾರದು. ಪ್ರತಿದಿನ ಅದಕ್ಕೆ ತಕ್ಕಂತೆ ಅಭ್ಯಾಸ ಮಾಡಿದಷ್ಟೂ ಸಂಕಲ್ಪ ದೃಢವಾಗುವುದು. ಕ್ರಮೇಣ ಅಭ್ಯಾಸ ಮಾಡದಿದ್ದರೆ ಏನನ್ನೋ ಕಳೆದುಕೊಂಡಂತಾಗುವುದು. ಹೀಗಾಗಬೇಕು; ಅದರಿಂದ ನಮಗೆ ಉತ್ತಮ ಅಧ್ಯಯನವೂ ಸಾಧ್ಯವಾಗುವುದು, ಮನಸ್ಸಿಗೆ ನೆಮ್ಮದಿಯೂ ಸಿಗುವುದು. ಕಲಿಕೆಯ ರಹಸ್ಯ ಇದೇ – ಓದು ಮನಸ್ಸಿಗೆ ಆನಂದ ನೀಡಬೇಕು. ಓದು, ಅಧ್ಯಯನ ಕಷ್ಟ ಎಂದು ಅನ್ನಿಸಲೇಬಾರದು. ಅದೊಂದು ಉಲ್ಲಾಸದ ಕೆಲಸ ಆಗಬೇಕು. ಹೀಗಾದರೆ, ನೀವು ಗೆದ್ದಂತೆ. ಕೇವಲ ಓದಿನಲ್ಲಿ ಮಾತ್ರವಲ್ಲ, ಇಡೀ ಜೀವನದಲ್ಲೇ.

### ಅಂದಂದಿನ ಕೆಲಸ



ಹೀಗಿದ್ದರೂ, ಪ್ರತಿ ದಿನ ನಾವು ಮಾಡಿ ಮುಗಿಸಬೇಕಾದ ಓದು ಇಷ್ಟು; ಇಷ್ಟನ್ನು ನಾನು ಈ ದಿನ ತಪ್ಪದೆ ಅಭ್ಯಾಸ ಮಾಡಲೇಬೇಕು ಎಂದು ಒಂದು ನಿರ್ದಿಷ್ಟ ಗುರಿಯನ್ನು ಹಾಕಿಕೊಳ್ಳಬೇಕು. ಅಷ್ಟನ್ನು ಆ ದಿನ ಮಾಡಿ ಮುಗಿಸಲೇಬೇಕು. ಇದರಿಂದ ಪ್ರತಿ ದಿನ ಅಭ್ಯಾಸ ಮಾಡುವ ಸ್ವಭಾವ ನಿಮಗೆ ಬರುತ್ತದೆ. ಇದರೊಂದಿಗೆ, ನಿಧಾನವಾಗಿ, ಹಾಗೂ ದೃಢವಾಗಿ ನೀವು ಮುಂದುವರಿಯುತ್ತೀರಿ. ನಿಮಗೆ ಅರಿವಿಲ್ಲದೆ ನೀವು ಸಾಕಷ್ಟು ಮುಂದೆ ಹೋಗುತ್ತೀರಿ. ಕೆಲವೇ ದಿನಗಳಲ್ಲಿ ನಿಮಗೆ ಆಶ್ಚರ್ಯ ವಾಗುವುದು, "ಆಹಾ, ನಾನು ಇಷ್ಟೊಂದು ಚೆನ್ನಾಗಿ ಅಭ್ಯಾಸ ಮಾಡಿರುವೆನಲ್ಲ!" ಎಂದು.

### ಕಠಿಣ ಪರಿಶ್ರಮ – ಅತ್ಯುತ್ತಮ ಪ್ರತಿಫಲ

ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಕಲ್ಲಿಯಬೇಕಾದ ಒಂದು ಪಾಠವೇ ಇದು – ಶ್ರಮವಿಲ್ಲದೆ ಏನನ್ನೂ ಸಾಧಿಸಲಾಗದು. ಸುಲಭದಿಂದ, ಪ್ರಯತ್ನವಿಲ್ಲದೆ ಏನನ್ನಾದರೂ ಹೆಚ್ಚಿನದನ್ನು ಸಾಧಿಸಬಹುದೆಂದು ಯಾರಾದರೂ ಹೇಳಿದರೆ, ಅದು ಹುರುಳಿಲ್ಲದ ಪೊಳ್ಳು ಮಾತು ಎಂದು ತಿರಸ್ಕರಿಸಿ. ಪ್ರಪಂಚದಲ್ಲಿ ಮಹತ್ಕಾರ್ಯಗಳನ್ನು ಮಾಡಿದವರೆಲ್ಲ ಅತ್ಯಂತ ಕಷ್ಟಪಟ್ಟು ದುಡಿದೇ ಮೇಲೆ ಬಂದಿದ್ದಾರೆ. ಅನಿರೀಕ್ಷಿತವಾಗಿ ಬಂದ ಭಾಗ್ಯ ಹೆಚ್ಚು ದಿನ ನಿಲ್ಲದು. ಕಾರಣ, ಕಷ್ಟಪಟ್ಟು ಮೇಲೆ ಬಂದವನಿಗೆ ಅವನ ಒಂದೊಂದು ಹೆಜ್ಜೆಯೂ ನೆನಪಿರುತ್ತದೆ. ಈ ಸತ್ಯವನ್ನು ನೆನಪಿನಲ್ಲಿಟ್ಟುಕೊಂಡು ಅಭ್ಯಾಸ ಮಾಡಿ, ಯಶಸ್ಸು ನಿಮ್ಮದು. ❁